**Akashvani : Bangalore**
**National Bulletin In Kannada**
**01.09.2024 / 7.35 am**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**01.09.2024 / 7.35 am**

<><*<><>*><>

**ಮುಖ್ಯಾಂಶಗಳು**

೧. ಜಗತ್ತಿನ ಮುಂದಿರುವ ಸವಾಲು ಎದುರಿಸಲು ಸಾಮೂಹಿಕ ಪ್ರಯತ್ನ ಅಗತ್ಯ; ಶುದ್ಧ ಇಂಧನ ಏಕೈಕ ಆಯ್ಕೆಯಾಗಲಿ- ಉಪರಾಷ್ಟ್ರಪತಿ ಜಗದೀಪ್ ಧನಕರ್

೨. ಕಳೆದ ೧೦ ವರ್ಷಗಳಲ್ಲಿ ದೇಶದ ಆರ್ಥಿಕತೆ ಶೇಕಡಾ ೯೦ರಷ್ಟು ಬೆಳವಣಿಗೆ; ಭಾರತ ಜಾಗತಿಕವಾಗಿ ದೊಡ್ಡ ಅವಕಾಶಗಳ ತಾಣ - ಪ್ರಧಾನಿ ನರೇಂದ್ರ ಮೋದಿ

೩. ಬೆಂಗಳೂರಿನ ಬಿಇಎಮ್‌ಎಲ್ ಗೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಇಂದು ಭೇಟಿ; ವಂದೇ ಭಾರತ್ ರೈಲುಗಳ ಸ್ಲೀಪರ್ ಬೋಗಿಗಳ ಪರಿಶೀಲನೆ

೪. ಪ್ಯಾರಾಲಿಂಪಿಕ್ಸ್; ಮಹಿಳೆಯರ ಶೂಟಿಂಗ್‌ನಲ್ಲಿ ಭಾರತದ ರುಬಿನಾ ಫ್ರಾನ್ಸಿಸ್‌ಗೆ ಕಂಚಿನ ಪದಕ

೫. ಡುರಾಂಡ್ ಕಪ್ ಫುಟ್ಬಾಲ್: ಚೊಚ್ಚಲ ಪ್ರಶಸ್ತಿ ಗೆದ್ದ ನಾರ್ಥ್ ಈಸ್ಟ್ ಯುನೈಟೆಡ್; ಫೈನಲ್‌ನಲ್ಲಿ ಮೋಹನ್ ಬಗಾನ್ ವಿರುದ್ಧ ಗೆಲುವು

<><*<><>*><>

ಶುದ್ಧ ಇಂಧನ ಮತ್ತೊಂದು ಆಯ್ಕೆಯಲ್ಲ, ಬದಲಿಗೆ ಅದೊಂದೇ ಏಕೈಕ ಆಯ್ಕೆಯಾಗಿದೆ ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಅಭಿಪ್ರಾಯಪಟ್ಟಿದ್ದಾರೆ. ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿರುವ ಭಾರತೀಯ ಪೆಟ್ರೋಲಿಯಂ ಸಂಸ್ಥೆಯ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ ವಿಜ್ಞಾನಿಗಳು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಶುದ್ಧ ಇಂಧನ ಇಲ್ಲದಿದ್ದರೆ ವಿಶ್ವವು ಬದುಕುಳಿಯುವ ಸವಾಲನ್ನು ಎದುರಿಸಬೇಕಾಗುತ್ತದೆ ಮತ್ತು ಸುಸ್ಥಿರ ಭವಿಷ್ಯಕ್ಕಾಗಿ ಹೋರಾಟ ನಡೆಸಬೇಕಾಗುತ್ತದೆ ಎಂದು ಹೇಳಿದರು. ಜಗತ್ತು ಇಂದು ಹವಾಮಾನ ಬದಲಾವಣೆ, ಜೀವವೈವಿಧ್ಯತೆಯ ಹಾನಿ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸವಕಳಿಯಂತಹ ಅಭೂತಪೂರ್ವ ಸವಾಲುಗಳನ್ನು ಎದುರಿಸುತ್ತಿದೆ. ಈ ಸಮಸ್ಯೆಗಳನ್ನು ಪರಿಹರಿಸಲು ಸಾಮೂಹಿಕ ಪ್ರಯತ್ನದ ಅಗತ್ಯವಿದೆ ಎಂದು ಉಪರಾಷ್ಟ್ರಪತಿ ಹೇಳಿದರು.

<><*<><>*><>

ಪ್ರಧಾನಿ ನರೇಂದ್ರ ಮೋದಿ ಅವರು, ಸೆಪ್ಟೆಂಬರ್ ೩ರಿಂದ ಬ್ರೂನೈ ಮತ್ತು ಸಿಂಗಾಪುರ ದೇಶಗಳಿಗೆ ಮೂರು ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ. ಬ್ರೂನೈ ಸುಲ್ತಾನ ಹಾಜಿ ಹಸನಲ್ ಬೋಲ್ಕಿಯಾ ಅವರ ಆಮಂತ್ರಣದ ಮೇರೆಗೆ ಪ್ರಧಾನಿ ಅವರು ಅಲ್ಲಿಗೆ ಭೇಟಿ ನೀಡುತ್ತಿದ್ದು, ಇದು ಆ ರಾಷ್ಟ್ರಕ್ಕೆ ಭಾರತದ ಪ್ರಧಾನಿಯೊಬ್ಬರ ಪ್ರಥಮ ಭೇಟಿಯಾಗಿದೆ ಎಂದು ವಿದೇಶಾಂಗ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ. ಭಾರತ ಮತ್ತು ಬ್ರೂನೈ ನಡುವಿನ ರಾಜತಾಂತ್ರಿಕ ಸಂಬಂಧಗಳು ಸ್ಥಾಪನೆಗೊಂಡು ೪೦ ವರ್ಷ ಪೂರ್ಣಗೊಂಡ ಸಂದರ್ಭದಲ್ಲಿ ಪ್ರಧಾನಿ ಅಲ್ಲಿಗೆ ಭೇಟಿ ನೀಡುತ್ತಿದ್ದಾರೆ ಎಂದು ಹೇಳಿದರು. ಪ್ರವಾಸದ ಎರಡನೇ ಚರಣದಲ್ಲಿ, ಪ್ರಧಾನಿ ನರೇಂದ್ರ ಮೋದಿ, ಸಿಂಗಾಪುರದ ಪ್ರಧಾನಿ ಲಾರೆನ್ಸ್ ವಾಂಗ್ ಅವರ ಆಹ್ವಾನದ ಮೇರೆಗೆ ಬರುವ ಬುಧವಾರ ಸಿಂಗಾಪುರಕ್ಕೆ ಭೇಟಿ ನೀಡಲಿದ್ದಾರೆ ಎಂದು ಜೈಸ್ವಾಲ್ ತಿಳಿಸಿದ್ದಾರೆ.

<><*<><>*><>

"ಸುಧಾರಣೆ, ಸಾಧನೆ ಮತ್ತು ಪರಿವರ್ತನೆ" ಸರಕಾರದ ಮಂತ್ರವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ನವದೆಹಲಿಯಲ್ಲಿನಿನ್ನೆ ಅವರು ಇಟಿ ಜಾಗತಿಕ ನಾಯಕರ ವೇದಿಕೆಯಲ್ಲಿಮಾತನಾಡಿ, ಕಳೆದ ೧೦ ವರ್ಷಗಳಲ್ಲಿಭಾರತದ ಆರ್ಥಿಕತೆ ಶೇಕಡಾ ೯೦ರಷ್ಟು ಬೆಳವಣಿಗೆ ಸಾಧಿಸಿದ್ದು, ಇದೇ ಅವಧಿಯಲ್ಲಿವಿಶ್ವದ ಆರ್ಥಿಕತೆಯು ಶೇಕಡಾ ೩೫ರಷ್ಟು ಬೆಳವಣಿಗೆ ದಾಖಲಿಸಿದೆ ಎಂದು ಹೇಳಿದರು. ಭವಿಷ್ಯದಲ್ಲಿಯೂ ಸುಸ್ಥಿರ ಬೆಳವಣಿಗೆ ಮುಂದುವರಿಯಲಿದ್ದು, ಭಾರತದ ಪ್ರಗತಿಗೆ ಜನತೆ ಸಾಕ್ಷಿಯಾಗಿದ್ದು, ಪೂರ್ಣ ವಿಶ್ವಾಸದಲ್ಲಿದ್ದಾರೆ. ಉತ್ತಮ ಆಡಳಿತ ನೀಡಲು ತಮ್ಮ ಸರ್ಕಾರ ಬದ್ಧವಾಗಿದ್ದು, ಕಳೆದ ೧೦ ವರ್ಷಗಳಲ್ಲಿ೨೫ ಕೋಟಿ ಜನರು ಬಡತನ ರೇಖೆಯಿಂದ ಮೇಲೆ ಬಂದಿದ್ದಾರೆ. ಮೂರನೇ ಅವಧಿಯ ಆಡಳಿತದಲ್ಲಿತಮ್ಮ ಸರ್ಕಾರದ ಉದ್ದೇಶಗಳು ಹೆಚ್ಚು ದೃಢವಾಗಿವೆ ಎಂದು ಪ್ರಧಾನಿ ಹೇಳಿದರು. ಭಾರತವು ಜಾಗತಿಕವಾಗಿ ದೊಡ್ಡ ಅವಕಾಶಗಳ ತಾಣವಾಗಿದೆ ಎಂದು ಹೇಳಿರುವ ಪ್ರಧಾನಿ, ವ್ಯಾಪಾರ ವಲಯದ ಅನುಕೂಲತೆ, ಸುಧಾರಣೆಗಳು, ಸ್ಥಿರ ನೀತಿ ಆಡಳಿತ ಮತ್ತು ಹೆಚ್ಚಿನ ಬೆಳವಣಿಗೆ ಕುರಿತು ಭರವಸೆ ನೀಡಿದ್ದಾರೆ. ಹೂಡಿಕೆದಾರರು ನಾವೀನ್ಯತೆ, ಕಾರ್ಯಕ್ಷಮತೆ ಮತ್ತು ಧನಾತ್ಮಕತೆಗೆ ಒತ್ತು ನೀಡುವುದರ ಜೊತೆಗೆ ಉತ್ತಮ ಗುಣಮಟ್ಟದ ಉತ್ಪನ್ನಗಳಿಗೆ ಬದ್ಧರಾಗುವಂತೆ ಕರೆ ನೀಡಿದರು. ಚುನಾವಣೆಯ ಸಂದರ್ಭದಲ್ಲಿ ಈ ವರ್ಷ ಹೆಚ್ಚಿನ ಸಂಖ್ಯೆಯ ಮತದಾರರು ಬದಲಾವಣೆಗಾಗಿ ತಮ್ಮ ಹಕ್ಕು ಚಲಾಯಿಸಿದರು. ಈ ಮೂಲಕ ನಿರಂತರತೆ, ರಾಜಕೀಯ ಸ್ಥಿರತೆ ಮತ್ತು ಆರ್ಥಿಕ ಬೆಳವಣಿಗೆಗೆ ಆದ್ಯತೆ ನೀಡಿದ್ದಾರೆ ಎಂದರು. ಹಸಿರು ಜಲಜನಕ, ಸೆಮಿಕಂಡಕ್ಟರ್‌ಗಳು, ಸಾಗರೋತ್ತರ ಮತ್ತು ಬಾಹ್ಯಾಕಾಶ ಕ್ಷೇತ್ರಗಳಲ್ಲಿ ಸರ್ಕಾರದ ಉಪಕ್ರಮಗಳನ್ನು ತಿಳಿಸಿದ ನರೇಂದ್ರ ಮೋದಿ ಅವರು, ಸವಾಲುಗಳು ಮತ್ತು ಅವಕಾಶಗಳಿಗೆ ದೇಶವನ್ನು ಸಜ್ಜುಗೊಳಿಸಲು ತಮ್ಮ ಸರಕಾರ ಬಯಸುತ್ತದೆ ಎಂದರು.

<><*<><>*><>

ದೇಶದಲ್ಲಿ ಸುಸ್ಥಿರ ವಿದ್ಯುನ್ಮಾನ ಉಪಕರಣಗಳ ಉತ್ತೇಜನಕ್ಕಾಗಿ ಹೊಸ ಯೋಜನೆಯೊಂದನ್ನು ಜಾರಿಗೊಳಿಸುವುದಾಗಿ ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ದೆಹಲಿಯ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಸಚಿವರು, ಸದ್ಯ ದೇಶದಲ್ಲಿ ಬಳಕೆಯಲ್ಲಿರುವ ಶೇಕಡ ೯೯ ರಷ್ಟು ಮೊಬೈಲ್ ಫೋನ್‌ಗಳು ದೇಸೀಯವಾಗಿ ಉತ್ಪಾದಿತವಾಗುತ್ತಿವೆ. ಐ ಫೋನ್‌ನ ಹೊಸ ಅವತರಣಿಕೆಯೂ ಕೂಡ ಈ ವರ್ಷದ ಕೊನೆಯಲ್ಲಿ ಭಾರತದಲ್ಲೇ

ಉತ್ಪಾದನೆಯಾಗುತ್ತದೆ ಎಂದರು. ೨೦೧೪-೧೫ರಲ್ಲಿ ೨೯ ಬಿಲಿಯನಷ್ಟಿದ್ದ ವಿದ್ಯುನ್ಮಾನ ಉಪಕರಣಗಳ ಉತ್ಪಾದನೆ, ೨೦೨೨-೨೩ರಲ್ಲಿ ೧೦೫ ಬಿಲಿಯನ್‌ಗೆ ಏರಿಕೆಯಾಗಿದೆ. ಕಳೆದ ಎರಡು ತಿಂಗಳಲ್ಲೇ ಎರಡು ಟ್ರಿಲಿಯನ್ ಮೌಲ್ಯದ ರೈಲ್ವೇ, ರಸ್ತೆ, ವಿಮಾನ ಮತ್ತು ಬಂದರು ಯೋಜನೆಗಳಿಗೆ ಅನುಮೋದನೆ ನೀಡಿದೆ ಎಂದು ಹೇಳಿದರು.

<><*<><>*><>

ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಹಾಗೂ ರೈಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರು ಇಂದು ಕರ್ನಾಟಕ ರಾಜ್ಯದಲ್ಲಿ ಬೆಂಗಳೂರಿನ ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್-ಬಿಇಎಂಎಲ್‌ನಲ್ಲಿ ವಂದೇ ಭಾರತ್ ರೈಲುಗಳ ಸ್ಲೀಪರ್ ಬೋಗಿಗಳ ಪರಿಶೀಲನೆ ನಡೆಸಲಿದ್ದಾರೆ. ಬೆಂಗಳೂರಿನ ತಿಪ್ಪಸಂದ್ರದಲ್ಲಿರುವ ಬಿಇಎಂಎಲ್ ಪ್ರಧಾನ ಕಟ್ಟಡದಲ್ಲಿ ಅಶ್ವಿನಿ ವೈಷ್ಣವ್ ಅವರು ಪರಿವೀಕ್ಷಣೆ ಮಾಡಲಿದ್ದಾರೆ. ಬಳಿಕ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಬಿಇಎಂಎಲ್ ಭೇಟಿಯ ಬಳಿಕ ರೈಲ್ವೆ ಸಚಿವರು, ಮಧ್ಯಾಹ್ನ ಬೆಂಗಳೂರಿನ ರೈಲ್ವೆ ತರಬೇತಿ ಕೇಂದ್ರದ ಬಹು-ಶಿಸ್ತಿನ ವಿಭಾಗೀಯ ತರಬೇತಿ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿರುವವರು ಮತ್ತು ಅಲ್ಲಿನ ಸಿಬ್ಬಂದಿಯೊಂದಿಗೂ ಸಂವಾದ ನಡೆಸಲಿದ್ದಾರೆ.

<><*<><>*><>

ಬೆಂಗಳೂರು-ಮಧುರೈ ಎಕ್ಸ್‌ಪ್ರೆಸ್ ರೈಲು ಸೇವೆಯಿಂದ ಈ ಎರಡು ನಿಲ್ದಾಣಗಳ ನಡುವೆ ಸಂಚರಿಸುವವರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದ್ದಾರೆ. ಮಧುರೈ ಮತ್ತು ಬೆಂಗಳೂರು ನಡುವಿನ 'ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು' ಸೇವೆಯ ಉದ್ಘಾಟನಾ ಕಾರ್ಯಕ್ರಮದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ ಯೋಜನೆಗಳನ್ನು ಮಂಜೂರು ಮಾಡುತ್ತಿದೆ ಎಂದು ತಿಳಿಸಿದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರೈಲ್ವೆ ವಲಯದಲ್ಲಿ ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಡಿಸೆಂಬರ್ ವೇಳೆಗೆ ಸುಧಾರಿತ ಪಂಬನ್ ರೈಲು ಸೇತುವೆ ಪೂರ್ಣಗೊಳ್ಳಲಿದೆ ಎಂದು ಹೇಳಿದ ಸಚಿವರು, ಯಾವುದೇ ರಾಜ್ಯದಲ್ಲಿ ರೈಲು ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ತಾರತಮ್ಯ ಮಾಡಲಾಗುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

<><*<><>*><>

ಹರಿಯಾಣ ವಿಧಾನಸಭಾ ಚುನಾವಣೆಯನ್ನು ಅಕ್ಟೋಬರ್ ೫ ಕ್ಕೆ ಮುಂದೂಡಿ ಕೇಂದ್ರ ಚುನಾವಣಾ ಆಯೋಗ ಹೊಸ ಆದೇಶ ಹೊರಡಿಸಿದೆ. ಈ ಮುನ್ನ ಅಕ್ಟೋಬರ್ ೧ ರಂದು ಚುನಾವಣೆ ನಿಗದಿಯಾಗಿತ್ತು. ಆದರೆ ಅಕ್ಟೋಬರ್ ೨ ರಂದು ಗುರು ಜಂಬಕೇಶ್ವರ ಜಯಂತಿಯನ್ನು ಹರಿಯಾಣಾದ್ಯಂತ ವಿಜೃಂಭಣೆಯಿಂದೆ ಆಚರಿಸಲಾಗುತ್ತದೆ. ಈ ಜಯಂತಿ ಹಿನ್ನೆಲೆಯಲ್ಲಿ ಹರಿಯಾಣ ವಿಧಾನಸಭಾ ಚುನಾವಣೆಯನ್ನು ಅಕ್ಟೋಬರ್ ೫ ಕ್ಕೆ ಮುಂದೂಡಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಹರಿಯಾಣ ಹಾಗೂ ಜಮ್ಮು-ಕಾಶ್ಮೀರ ವಿಧಾನಸಭಾ ಚುನಾವಣೆಗಳ ಫಲಿತಾಂಶವನ್ನೂ ಸಹ ಅಕ್ಟೋಬರ್ ೪ ರ ಬದಲು ಅಕ್ಟೋಬರ್ ೮ ರಂದು ಪ್ರಕಟಿಸಲಾಗುವುದು ಎಂದು ಆಯೋಗ ಹೇಳಿದೆ.

<><*<><>*><>

ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತದ ಗುರಿಕಾರ್ತಿ ರುಬಿನಾ ಫ್ರಾನ್ಸಿಸ್ ಕಂಚಿನ ಪದಕ ಗೆದ್ದುಕೊಂಡಿದ್ದಾರೆ. ಮಹಿಳೆಯರ ೧೦ ಮೀಟರ್ ಏರ್ ಪಿಸ್ತೂಲ್ ಎಸ್‌ಎಚ್-೧ ಫೈನಲ್‌ನಲ್ಲಿ ೨೫ ವರ್ಷದ ಮಧ್ಯಪ್ರದೇಶ ಶೂಟರ್ ರುಬಿನಾ ಒಟ್ಟು ೨೧೧.೧ ಅಂಕಗಳಿಸಿ ಮೂರನೇ ಸ್ಥಾನದೊಂದಿಗೆ ಕಂಚಿನ ಪದಕಕ್ಕೆ ಅರ್ಹರಾದರು. ಈ ಮಧ್ಯೆ ಭಾರತದ ಸುವಾಸ್ ಯತಿರಾಜ್ ಮತ್ತು ಸುಕಾಂತ್ ಕದಮ್ ಅವರೂ ಸಹ ಪುರುಷರ ಬ್ಯಾಡ್ಮಿಂಟನ್ ಸ್ಪರ್ಧೆಯ ಎಸ್‌ಎಲ್-೪ ವಿಭಾಗದ ಪುರುಷರ ಸಿಂಗಲ್ಸ್ ಸೆಮಿ ಫೈನಲ್ಸ್ ಪ್ರವೇಶಿಸಿದ್ದಾರೆ. ಇದರೊಂದಿಗೆ ಈ ಇಬ್ಬರು ಶೆಟ್ಲರ್‌ಗಳು ಬ್ಯಾಡ್ಮಿಂಟನ್‌ನಲ್ಲಿ ಭಾರತಕ್ಕೆ ಮೊದಲ ಬಾರಿಗೆ ಪದಕ ಖಚಿತಪಡಿಸಿದ್ದಾರೆ. ಇಂದು ಸೆಮಿ ಫೈನಲ್ಸ್ ಪಂದ್ಯಗಳು ನಡೆಯಲಿವೆ. ಪ್ಯಾರಾಲಿಂಪಿಕ್ಸ್‌ನಲ್ಲಿ ಈವರೆಗೆ ಭಾರತ, ೧ ಚಿನ್ನ, ೧ ಬೆಳ್ಳಿ ಮತ್ತು ೩ ಕಂಚು ಸೇರಿದಂತೆ ಒಟ್ಟು ೫ ಪದಕಗಳನ್ನು ಗೆದ್ದುಕೊಂಡಿದೆ. ಶೂಟಿಂಗ್‌ನಲ್ಲಿ ಕಂಚಿನ ಪದಕ ಗೆದ್ದ ರುಬಿನಾ ಫ್ರಾನ್ಸಿಸ್‌ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ ಸಲ್ಲಿಸಿದ್ದಾರೆ. ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದ ಶೂಟಿಂಗ್‌ನಲ್ಲಿ ಭಾರತದ ಸ್ಪರ್ಧಿಗಳು ಉತ್ತಮ ಪ್ರದರ್ಶನ ನೀಡುತ್ತಿದ್ದಾರೆ. ರುಬಿನಾ ಸಾಧನೆ ಪ್ರತಿಯೊಬ್ಬರಿಗೂ ಸ್ಫೂರ್ತಿಯಾಗಿದ್ದು, ವಿಶೇಷವಾಗಿ ದಿವ್ಯಾಂಗರಲ್ಲಿ ಆತ್ಮವಿಶ್ವಾಸ ಹೆಚ್ಚುವಂತೆ ಮಾಡಿದೆ ಎಂದು ರಾಷ್ಟ್ರಪತಿ ಹೇಳಿದ್ದಾರೆ. ರುಬಿನಾ ಸಾಧನೆ ದೇಶದ ಮತ್ತೊಂದು ಹೆಮ್ಮೆ, ಅವರ ಬದ್ಧತೆ, ಕ್ರೀಡಾ ಕೌಶಲ್ಯ ಮತ್ತು ಅತ್ಯುತ್ತಮ ಪ್ರದರ್ಶನ ದೇಶದ ಕೀರ್ತಿ ಹೆಚ್ಚಿಸಿದೆ ಎಂದು ಪ್ರಧಾನಿ ತಿಳಿಸಿದ್ದಾರೆ.

<><*<><>*><>

ಕೋಲ್ಕೊತಾದಲ್ಲಿನಿನ್ನೆ ರಾತ್ರಿ ನಡೆದ ಡುರಾಂಡ್ ಕಪ್ ಫುಟ್ಬಾಲ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ಫುಟ್ಬಾಲ್ ಕ್ಲಬ್ ತಂಡ ಪೆನಾಲ್ಟಿ ಅವಕಾಶದಲ್ಲಿ ಮೋಹನ್ ಬಗಾನ್ ಸೂಪರ್ ಜೈಂಟ್ ತಂಡದ ವಿರುದ್ಧ ೪-೩ ಗೋಲುಗಳಿಂದ ಜಯಗಳಿಸಿ ಪ್ರಶಸ್ತಿ ಗೆದ್ದುಕೊಂಡಿದೆ. ನಾರ್ತ್ ಈಸ್ಟ್ ಯುನೈಟೆಡ್ ತಂಡದ ಆಟಗಾರರು ಮೊದಲ ಬಾರಿಯ ಫೈನಲ್ ಪ್ರವೇಶದಲ್ಲಿಯೇ ಚೊಚ್ಚಲ ಬಾರಿಗೆ ಟ್ರೋಫಿ ಗೆದ್ದ ಸಾಧನೆ ಮಾಡಿದರು. ಈ ಮೂಲಕ ಮೊದಲ ಕ್ಲಬ್ ಟ್ರೋಫಿಗೂ ಭಾಜನರಾದರು. ನಿಗದಿತ ಅವಧಿಯಲ್ಲಿ ಉಭಯ ತಂಡಗಳು ೨-೨ ಗೋಲುಗಳಿಂದ ಸಮಬಲ ಸಾಧಿಸಿದ್ದವು. ಆದರೆ, ಪೆನಾಲ್ಟಿ ಅವಕಾಶದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ತಂಡ ಮೇಲುಗೈ ಸಾಧಿಸುವ ಮೂಲಕ ಏಷ್ಯಾದ ಅತಿ ಹಳೆಯದಾದ ಡುರಾಂಡ್ ಕಪ್ ಟೂರ್ನಿಯಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿತು. ªÀÄಮೊದಲ ಅವಧಿಯಲ್ಲಿ ಮೋಹನ್ ಬಗಾನ್ ತಂಡ ಜೇಸನ್ ಕುಮಿಂಗ್ಸ್ ಮತ್ತು ಸಹಾಲ್ ಅಬ್ದುಲ್ ಸಮದ್ ಮೂಲಕ ಗೋಲು ಸಂಪಾದಿಸಿ ೨-೦ ಮುನ್ನಡೆಯಲ್ಲಿತ್ತು. ಆದರೆ, ಎರಡನೇ ಅವಧಿಯಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ಪರ ಗಿಲೆರ್ಮೊ ಮತ್ತು ಅಲೈದ್ದಿನೆ ಅಜರಾಯಿ ಕ್ರಮವಾಗಿ ಗೋಲು ಗಳಿಸಿ ಹಿನ್ನಡೆ ಅಂತರವನ್ನು ೨-೨ಕ್ಕೆ ಸಮಗೊಳಿಸಿದರು. ಹಾಗಾಗಿ, ಫಲಿತಾಂಶದ ನಿರ್ಧಾರಕ್ಕಾಗಿ ನಡೆದ ಪೆನಾಲ್ಟಿ ಶೂಟೌಟ್‌ನಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ತಂಡ ಉತ್ತಮ ರಕ್ಷಣಾ ಗೋಡೆ ನಿರ್ಮಾಣದೊಂದಿಗೆ ಮೋಹನ್ ಬಗಾನ್‌ಗೆ ಮೇಲುಗೈ ಸಾಧಿಸಲು ಅವಕಾಶ ನೀಡದೇ ಚಾಂಪಿಯನ್ ಪಟ್ಟಕ್ಕೆ ಭಾಜನವಾಯಿತು.

<><*<><>*><>

ತ್ರಿಪುರಕ್ಕೆ ಅಕ್ರಮವಾಗಿ ವಲಸೆ ಬಂದಿದ್ದ ೭ ಬಾಂಗ್ಲಾದೇಶ ಮತ್ತು ಇಬ್ಬರು ರೋಹಿಂಗ್ಯಾ ಪ್ರಜೆಗಳನ್ನು ರೈಲ್ವೇ ಪೊಲೀಸ್ ಮತ್ತು ಗಡಿ ಭದ್ರತಾ ಪಡೆ ಬಂಧಿಸಿದೆ. ೨೦೧೭ರಿಂದ ಮಯನ್ಮಾರ್ ಹಿಂಸಾಚಾರ ಹಿನ್ನೆಲೆಯಲ್ಲಿ ಬಾಂಗ್ಲಾದೇಶದ ವಿವಿಧ ಪರಿಹಾರ ಕೇಂದ್ರಗಳಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ರೋಹಿಂಗ್ಯಾ ಪ್ರಜೆಗಳು ಆಶ್ರಯ ಪಡೆದಿದ್ದಾರೆ. ಇವರಲ್ಲಿ ಕೆಲವರು ಭಾರತದ ಗಡಿ ಪ್ರವೇಶಿಸುತ್ತಿದ್ದಾರೆ. ಕಳೆದ ಮೂರು ತಿಂಗಳಲ್ಲಿ ೩೧೦ ಬಾಂಗ್ಲಾದೇಶ ಮತ್ತು ೩೪ ರೋಹಿಂಗ್ಯಾ ಪ್ರಜೆಗಳನ್ನು ಬಂಧಿಸಲಾಗಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಅಪರಾಹ್ನ ೧.೧೦ ಕ್ಕೆ <>*><>**